ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ______________

ಪತ್ರಿಕೆಯ ಹೆಸರು : NAME OF THE NEWS PAPER: ______________ ದಿನಾಂಕ : DATE : 18/9/20

## ಮಾಸ್ಕ್ ಉಚಿತ, ತಪಾಸಣೆಯಿಲ್ಲದೆ ಪ್ರವೇಶವಿಲ್ಲ। ದಿನಕ್ಕೆ 3 ಬಾರಿ ಸ್ಯಾನಿಟೈಸೇ

# ಕಲಾಪಕ್ಕೆ ಏಳು ಸುತ್ತಿನ ಕೋ

**ಇದೇ 21 ರಿಂದ 30 ರ ಅವಧಿಯಲ್ಲಿ 8 ದಿನಗಳ ಕಾಲ ನಡೆಯಲಿರುವ 15ನೇ ವಿಧಾನಸಭೆ ಜಂಟಿ ಅಧಿವೇಶನಕ್ಕೆ ಸಕಲ ಸಿದ್ಧತೆಯನ್ನು ಪೂರ್ಣಗೊಳಿಸಲಾಗಿ ಬಾರಿಯ ಅಧಿವೇಶನಕ್ಕೆ ಕೊರೊನಾ ಸವಾಲ್ ಎದುರಾಗಿದ್ದು, ಅದನ್ನು ವ್ಯವಸ್ಥಿತ ರೀತಿಯಲ್ಲಿ ಎದುರಿಸಲು ವಿಧಾನಸಭೆ ಸಚಿವಾಲಯ ಅಂತಿಮ ಸ್ಪರ್ಶ ನೀಡ ಕೇಂದ್ರ ಸರ್ಕಾರದ ಕೋವಿಡ್-19 ಮಾರ್ಗಸೂಚಿ ಪ್ರಕಾರ, ಅಧಿವೇಶನದಲ್ಲಿ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳ ಹಿನ್ನೆಲೆಯಲ್ಲಿ ಕುಳಿತುಕೊಳ ಆಸನಗಳಿಂದ ಹಿಡಿದು ಸಾಕಷ್ಟು ಮಾರ್ಪಾಡುಗಳನ್ನು ಮಾಡಲಾಗಿದೆ. ಅದರ ಸಂಪೂರ್ಣ ಮಾಹಿತಿ ಇಲ್ಲಿದೆ.**

■ ಚೆನ್ನವೀರ ಸಗರನಾಳ

ಸಂ.ಕ.ಸಮಾಚಾರ, ಬೆಂಗಳೂರು 18/9/20

**ಪರೀಕ್ಷೆ ಕಡ್ಡಾಯ**

ಅಧಿವೇಶನಕ್ಕೆ ಹಾಜರಾಗುವ ಪ್ರತಿಯೊಬ್ಬ ಶಾಸಕರಿಂದ ಹಿಡಿದು ಅವರ ಆಪ್ತ ಸಿಬ್ಬಂದಿಯು 72 ಗಂಟೆಗಳಿಗೂ ಮುನ್ನವೇ ಕೊರೊನಾ ಸೋಂಕು ಇರದ ಬಗ್ಗೆ ದೃಢೀಕರಿಸಬೇಕು. ಆಯಾ ತಾಲೂಕು ಆರೋಗ್ಯ ಕೇಂದ್ರಗಳಿಂದ ಅಥವಾ ಆಸ್ಪತ್ರೆಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ವಿಧಾನಸೌಧದ ಭದ್ರತಾ ಸಿಬ್ಬಂದಿಗೆ ತೋರಿಸಬೇಕು. ಜೊತೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲೂ ಆರ್‌ಟಿ-ಪಿಸಿಆರ್ ಟೆಸ್ಟ್‌ಗೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಬೇಕಿದ್ದರೆ ಅಲ್ಲಿಯೂ ತಪಾಸಣೆ ಮಾಡಿಸಿಕೊಳ್ಳಬಹುದಾಗಿದೆ.

ಕೊರೊನಾ ನೆಗೆಟಿವ್ ರಿಪೋರ್ಟ್‌ನ ಪ್ರಮಾಣ ಪತ್ರವನ್ನಾಗಲಿ ಅಥವಾ ಈ ಬಗ್ಗೆ ಮೊಬೈಲ್‌ನಲ್ಲಿ ಬಂದ ಸಂದೇಶವನ್ನಾಗಲಿ ತೋರಿಸುವುದು ಕಡ್ಡಾಯವಾಗಿದೆ. ಒಂದೊಮ್ಮೆ ಕೋವಿಡ್ ಟೆಸ್ಟ್ ಮಾಡಿಸಿಲ್ಲವೆಂದಾದರೆ, ಅಂಥವರಿಗೆ ಯಾವ ಕಾರಣಕ್ಕೂ ವಿಧಾನಸೌಧದೊಳಗೆ ಪ್ರವೇಶ ವಿರುವುದಿಲ್ಲ. ಇದು ಅಧಿವೇಶನದ ವರದಿಗಾರಿಕೆಗೆಂದು ಬರುವ ಎಲ್ಲ ಮಾಧ್ಯಮ ಪ್ರತಿನಿಧಿಗಳಿಗೂ ಅನ್ವಯಿಸುತ್ತದೆ. ಇದೇ ದಿನಾಂಕ 18 ಮತ್ತು 19 ರಂದು ಬೆಳಗ್ಗೆ 8ರಿಂದ ಸಾಯಂಕಾಲ 4 ಗಂಟೆಯವರೆಗೂ ಉಚಿತವಾಗಿ ಕೊರೊನಾ ಟೆಸ್ಟ್ ಮಾಡಿಸಿಕೊಳ್ಳಬಹುದಾಗಿದೆ.



**ಫೈಬರ್ ಗ್ಲಾಸ್ ಗೋಡೆ**

ಕೊರೊನಾ ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಸದನದೊಳಗೆ ಕೂರುವ ಆಸನಗಳಲ್ಲಿ ಸಾಮಾಜಿಕ ಅಂತರವನ್ನು ಪರಿಪಾಲಿಸಲಾಗುವುದು. ಇದಕ್ಕಾಗಿ ಪ್ರತಿಯೊಂದು ಆಸನದ ಮಧ್ಯೆ ಭಾಗದಲ್ಲಿ ಫೈಬರ್ ಗ್ಲಾಸ್ ಅಳವಡಿಸಲಾಗಿರುತ್ತದೆ. ಜೊತೆಗೆ ಪ್ರತಿಯೊಬ್ಬರೂ ಮಾಸ್ಕ್ ಧರಿಸಬೇಕು. ಮುಖಕ್ಕೆ ಶೀಲ್ಡ್ ಮಾಸ್ಕ್‌ಅನ್ನು ನೀಡಲಾಗುವುದು. ಇದಕ್ಕಾಗಿ ಆರೋಗ್ಯ ಇಲಾಖೆಯ ವತಿಯಿಂದ 500 ಶೀಲ್ಡ್ ಮಾಸ್ಕ್‌ಗಳನ್ನು ಈಗಾಗಲೇ ತರಿಸಲಾಗಿದೆ. ಒಂದು ಬಾರಿ ಉಪಯೋಗಿಸುವ ಶೀಲ್ಡ್ ಮಾಸ್ಕ್‌ಗಳನ್ನು ನೀಡಬೇಕೆಂದಾದಲ್ಲಿ ಇಲಾಖೆ ಅದಕ್ಕೂ ವ್ಯವಸ್ಥೆ ಮಾಡಿದೆ. ದಿನವೊಂದಕ್ಕೆ 300 ರಂತೆ 10 ದಿನಗಳಿಗೆ ಒಟ್ಟು 3000 ಶೀಲ್ಡ್ ಮಾಸ್ಕ್‌ಗಳ ಲಭ್ಯತೆ ಇದೆ.

**ಏಸಿ ಇರಲ್ಲ, ಗಾಳಿ ಬೆಳಕು ಯಥೇಚ್ಛ**

ಅಧಿವೇಶನ ನಡೆಯುವ ಸದನದೊಳಗೆ ಕೊರೊನಾ ನಿಯಂತ್ರಿಸುವ ಸಲುವಾಗಿ ಈ ಬಾರಿ ಎಲ್ಲಿಯೂ ಕೂಡ ಏಸಿ ಸೌಲಭ್ಯವಿರುವುದಿಲ್ಲ. ಬದಲಾಗಿ ಎಲ್ಲ ಕಿಟಕಿ-ಬಾಗಿಲುಗಳನ್ನು ತೆರೆಯಲಾಗುವುದು. ಇದರಿಂದ ಸಹಜ ಗಾಳಿ ಬೆಳಕು ಯಥೇಚ್ಛವಾಗಿ ದೊರೆಯುವಂತೆ ನೋಡಿಕೊಳ್ಳಲಾಗುತ್ತದೆ. ವಿಶೇಷವಾಗಿ ಧೂಮಪಾನಕ್ಕಾಗಿ ಬಿಡಲಾದ ಸ್ಥಳದಲ್ಲಿನ ಕಿಟಕಿ-ಬಾಗಿಲುಗಳನ್ನು ಈ ಬಾರಿ ತೆರೆಯಲಾಗುವುದು. ಇಲ್ಲಿಂದ ಸಾಕಷ್ಟು ಆಮ್ಲಜನಕವೂ ಸಿಗುತ್ತದೆ. ದಿನಕ್ಕೆ 3 ಬಾರಿ ಸ್ಯಾನಿಟೈಸೇಶನ್ ಮಾಡಲಾಗುವುದು. ಪ್ರತಿಯೊಬ್ಬ ಸದಸ್ಯರ ಮೇಜಿನ ಮೇಲೆ 50 ಎಂಎಲ್ ಸ್ಯಾನಿಟೈಸರ್ ಬಾ ಇರಿಸಲಾಗುವುದು. ಪ್ರತಿಯೊಬ್ಬ ಸಚಿವರೂ ಆಪ್ತ ಸಿಬ್ಬಂದಿಯನ್ನು ಕರೆತರಬೇಕು. ಸದನದೊಳಗೆ ಓರ್ವ ಓರ್ವ ಆಪ್ತ ಸಹಾಯಕರ ಪ್ರವೇಶಕ್ಕೆ ಮಾತ್ರ ಅವಕಾ ನಿಯೋಗಗಳಿಗೆ ಅವಕಾಶವಿಲ್ಲ. ಇದಕ್ಕಾಗಿ ಸಚಿವರ ಭೇಟಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಈ ಬ ರಹಿತ ಅಧಿವೇಶನ ನಡೆಸಲು ಪ್ರಯತ್ನಿಸಲಾಗುತ್ತದ ಏನೇ ಸುತ್ತೋಲೆಗಳು, ಶಾಸನಗಳ ಕರಡು ಪ್ರತಿಗಳಿದ್ದರೂ ಅವುಗಳನ್ನು ಇ-ಮೇಲ್ ಮುಖಾಂತರ ಸದಸ್ಯರಿಗೆ ತಲುಪಿಸಲಾಗುತ್ತದೆ. ಮಾಧ್ಯಮದವರಿಗೂ ಇದೇ ನಿಯಮ ಅನ್ವಯಿಸುತ್ತದೆ.



**ಮಾಧ್ಯಮದವರು ಮೇಲೆ**

ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಸಲುವಾಗಿ ಈ ಬಾರಿ ಮಾಧ್ಯಮದ ಎಲ್ಲ ಪ್ರತಿನಿಧಿಗಳಿಗೆ ಸಾರ್ವಜನಿಕರ ಗ್ಯಾಲರಿಯಲ್ಲಿ ಕುಳಿತುಕೋ ಮಾಡಲಾಗಿದ್ದು, ಟಿವಿ, ಸಿಸ್ಟಮ್ಸ್, ಇಂಟರ್‌ನೆಟ್, ಲ್ಯಾಂಡ್‌ಲೈ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದು ಬದಲಾವಣೆ ಮಾತ್ರ, ಈ ಮೊದಲಿನ 40 ಇಯರ್‌ಫೋ ಸೇರಿ ಇನ್ನೂ 20 ಹೊಸ ಇಯರ್‌ಫೋನ್‌ಗಳನ್ನು ತರಿ ಮಾಧ್ಯಮದವರ ವರದಿಗಾರಿಕೆಗೆ ಯಾವ ತೊಂದರೆಯ ನೋಡಿಕೊಳ್ಳಲಾಗುವುದು.

**ಕ್ಯಾಂಟೀನ್ ಶಿಫ್ಟ್**

ವಿಧಾನಸೌಧದೊಳಗೆ ಇದ್ದ ಕ್ಯಾಂಟೀನ್‌ಅನ್ನು ಮಾಡಲಾಗಿದೆ. ಸದ್ಯ ಸೆಂಟ್ರಲ್ ಹಾಲ್‌ಗೆ ಉಪಹಾರ ಕೇ ಶಿಫ್ಟ್ ಮಾಡಲಾಗಿದೆ.

**ಶ್ರದ್ಧಾಂಜಲಿ ಬಳಿಕ ಸದನ ಮುಂದುವರಿಕೆ**

ಸಂಪ್ರದಾಯದಂತೆ ಸದನದ ಆರಂಭ ದಿನ ಅಗಲಿದ ಶ್ರದ್ಧಾಂಜಲಿ ಸಲ್ಲಿಸಿ ಅಧಿವೇಶನವನ್ನು ಮಾರನೇ ಮುಂದೂಡುವುದು ವಾಡಿಕೆ. ಆದರೆ, ಇದೇ ಮೊದ ಎಂಬಂತೆ ಶ್ರದ್ಧಾಂಜಲಿ ಬಳಿಕ ಮಧ್ಯಾಹ್ನವೇ ಸ ಮುಂದುವರಿಸಲಾಗುತ್ತದೆ. ಇದಕ್ಕೆ ಆಡಳಿತ ಪಕ್ಷ ಸ ವಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸಹಮತ ಸ ತದನಂತರ ಸ್ಪೀಕರ್ ಅವರು ಬ್ಯುಸಿನೆಸ್ ಅಡ್ವೈಸರಿ ಕ ನಡೆಸಲು ತೀರ್ಮಾನಿಸಲಾಗಿದೆ ಎಂದು ಎಂದು ವಿ ಸಚಿವಾಲಯದ ಆಪ್ತ ಮೂಲಗಳಿಂದ ತಿಳಿದು ಬಂದಿದ

### ಧರಣಿಗೆ ಅವಕಾಶ ಇಲ್ಲ

ಈ ಬಾರಿ ಸದನದಲ್ಲಿ ಎಲ್ಲ ಪಕ್ಷಗಳ ಸದಸ್ಯರು ಸಂಯಮವನ್ನು ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕೊರೊನಾ ತಂದೊಡ್ಡಿದೆ ಎಂದು ಹೇಳಬಹುದು. ಆದುದರಿಂದ ಯಾರೂ ಕೂಡ ಸದನದ ಬಾವಿಗೆ ಇಳಿದು ಗುಂಪುಗೂಡಿ ಧರಣಿ ಮಾಡುವಂತಿಲ್ಲ ಎಂದು ಈಗಾಗಲೇ ಮನವರಿಕೆ ಮಾಡಲಾಗಿದೆ. ಏನೇ ಪ್ರತಿಭಟನೆ ಇದ್ದರೂ ಸದಸ್ಯರು ತಾವು ಕುಳಿತ ಜಾಗದಿಂದಲೇ ಮಾಡಬಹುದಾಗಿದೆ. ಇನ್ನು 60 ದಾಟಿದ ಸದಸ್ಯರು ಆರೋಗ್ಯದ ಹಿತದೃಷ್ಟಿಯಿಂದ ಅಧಿವೇಶನಕ್ಕೆ ಬಾರದಂತೆ ಮನವಿ ಮಾಡಲಾಗಿದೆ.



"ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿಯ ಅಧಿವೇಶನದಲ್ಲಿ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಮತ್ತು ಮಾಧ್ಯಮದವರು ಸೇರಿದಂತೆ ಎಲ್ಲರಿಗೂ ಈ ಬಗ್ಗೆ ತಿಳುವಳಿಕೆ ಇಲ್ಲವೆಂದೇನಿಲ್ಲ. ಆದರೆ, ಅದನ್ನು ಪಾಲಿಸುವುದು ಮುಖ್ಯ

■ ವಿಶ್ವೇಶ್ವರ ಹೆಗಡೆ ಕಾಗೇರಿ । ವಿಧಾನಸಭಾಧ್ಯಕ್ಷ